GST - 2017

ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

2017

3837307

ಪ್ರಶ್ನೆಪುಸ್ತಿಕೆ

ಸಾಮಾನ್ಯ ಅಧ್ಯಯನ

ಪ್ರಶ್ನೆಪುಸ್ತಿಕೆ ಶ್ರೇಣಿ

C

ಸಮಯ : $1\frac{1}{2}$ ಗಂಟೆಗಳು

ವಿಷಯ ಸಂಕೇತ : 176

ಗರಿಷ್ಠ ಅಂಕಗಳು : 150

ಸೂಚನೆಗಳು

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಒ.ಎಂ.ಆರ್. ಉತ್ತರಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಯನ್ನು ಗುರುತು ಮಾಡುವ ಮೊದಲು, ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಪರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪುಸ್ತಿಕೆಯ ಶ್ರೇಣಿ A, B, C ಅಥವಾ D ಅನ್ನು ವಿಷಯ ಸಂಕೇತ ಮತ್ತು ನೋಂದಣಿ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು. ಹಾಗೂ ನಿಗದಿತ ಸ್ಥಳದಲ್ಲಿ ತಾವು ಮತ್ತು ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಒ.ಎಂ.ಆರ್. ಹಾಳೆಯಲ್ಲಿ ತಿಳಿಸಿರುವ ಯಾವುದೇ ಮಾಹಿತಿಯನ್ನು ಭರ್ತಿ ಮಾಡುವುದು/ಎನ್ ಕೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಭರ್ತಿ ಮಾಡದಿದ್ದಲ್ಲಿ/ತಪ್ಪಿದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

ನೋಂದಣಿ ಸಂಖ್ಯೆ
5071 982

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕಿನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
9. **ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು. ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳಲ್ಲಿ ಯಾವುದೇ ಗೊಂದಲಗಳಿದ್ದರೂ ಆಂಗ್ಲಭಾಷೆಯ ಪ್ರಶ್ನೆಗಳೇ ಅಂತಿಮವಾಗಿರುತ್ತದೆ.**

ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.

***Note** : English version of the instructions is printed on the back cover of this booklet.*

www.kpscvaani.com

1. ಒಂದು ಸಾರ್ವಜನಿಕ ಸ್ವಾಮ್ಯದ ಕಂಟೇನರ್ (CONCOR) ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಕೆಳಗಿನ ಯಾವ ಸಚಿವಾಲಯದ ಅಡಳಿತ ನಿಯಂತ್ರಣದಲ್ಲಿದೆ ?

(1) ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ಯಮಗಳ ಸಚಿವಾಲಯ

(2) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ ಸಚಿವಾಲಯ

(3) ರೈಲ್ವೆಗಳ ಸಚಿವಾಲಯ

(4) ಹಡಗುಗಳ ಸಚಿವಾಲಯ

2. ಪ್ರತಿ ವರ್ಷದ ಜನವರಿ 15 ರಿಂದು ಸೈನಿಕರ ದಿನವನ್ನಾಗಿ ಏಕೆ ಆಚರಿಸಲಾಗುವುದು ?

(1) ಜನರಲ್ ಕಾರಿಯಪ್ಪಾರವರು ಭಾರತೀಯ ಸೈನ್ಯದ ಮೊದಲ ಭಾರತೀಯ ಕಮಾಂಡರ್ ಮುಖ್ಯಸ್ಥರಾದ ದಿನ

(2) ಇದು ಕೇಂದ್ರ ಸರ್ಕಾರದಿಂದ ನಿರ್ಧರಿತವಾದ ದಿನವಾಗಿದ್ದು, ಇದರಿಂದ ಬೇರೆ ದಿನಗಳೊಂದಿಗೆ ಸಂಘರ್ಷ ಉಂಟಾಗುವುದಿಲ್ಲ

(3) ಜನವರಿ ತಿಂಗಳಿನಲ್ಲಿ ವಿವಿಧ ಸಮಾರಂಭಗಳನ್ನು ನಡೆಸಲು ವಾಯುಗುಣವು ಸೂಕ್ತವಾಗಿರುವುದು

(4) ಗಣರಾಜ್ಯ ದಿನದ ಪರೇಡ್‌ನಲ್ಲಿ ಭಾಗವಹಿಸುವ ದಳಗಳ ಆಯ್ಕೆಯನ್ನು ಮಾಡಲು ಸಹಕಾರಿಯಾಗಿರುವುದು

3. 1960 ರಲ್ಲಿ, ಒಂದು ಶಾಸ್ತ್ರೀಯ ಆಧುನಿಕ ಅಮೆರಿಕಾ 'ಆಣಕು ಪಕ್ಷಿಯನ್ನು ಕೊಲ್ಲಲು' ಸಾಹಿತ್ಯದ ಪುಸ್ತಕವು ಪ್ರಕಟವಾಯಿತು ಮತ್ತು ತತ್ಕ್ಷಣವೇ ಪುಲಿಟ್ಜರ್ ಬಹುಮಾನವನ್ನು ಗೆದ್ದಿತು. ಈ ಕೆಳಗಿನವರಲ್ಲಿ ಯಾರು ಆ ಲೇಖಕರಾಗಿದ್ದಾರೆ ?

(1) ಹಾರ್ಪರ್ ಲೀ

(2) ಎಫ್. ಸ್ಕಾಟ್ ಫಿಟ್ಸ್‌ಜೆರಾಲ್ಡ್

(3) ಮಾರ್ಕ್ ಟ್ವೈನ್

(4) ಜೆ.ಡಿ. ಸಾಲಿಂಗರ್

4. ಲೋಕಸಭೆಯ ಸ್ಪೀಕರ್ (ಸಭಾಧ್ಯಕ್ಷರು) ಇವರು ತಮ್ಮ ರಾಜೀನಾಮೆ ಪತ್ರವನ್ನು ಇವರಿಗೆ ಸಲ್ಲಿಸಬೇಕು

(1) ಪ್ರಧಾನ ಮಂತ್ರಿಗಳು

(2) ಲೋಕ ಸಭೆಯ ಉಪಸಭಾಪತಿಗಳು

(3) ರಾಷ್ಟ್ರಪತಿಯವರು

(4) ಉಪರಾಷ್ಟ್ರಪತಿಯವರು

5. ಕೆಳಗಿನವುಗಳಲ್ಲಿ ಯಾವುದು, ರಾಜ್ಯ ನೀತಿಯ ನಿರ್ದೇಶಕ ತತ್ವಗಳಲ್ಲೊಂದಾಗಿವೆ ?

(1) ರಾಜ್ಯವು ಕಾನೂನಿನ ಮುಂದೆ ಯಾವುದೇ ವ್ಯಕ್ತಿಯ ಸಮಾನತೆಯನ್ನು ಅಲ್ಲಗಳೆಯುವಂತಿಲ್ಲ

(2) ರಾಜ್ಯವು ಯಾವುದೇ ವ್ಯಕ್ತಿಯನ್ನು ಧರ್ಮ, ಜನಾಂಗ, ಜಾತಿ, ಲಿಂಗ ಅಥವಾ ಜನ್ಮ ಸ್ಥಳದ ಆಧಾರದ ಮೇಲೆ (ಪಕ್ಷ) ಭೇದ ಮಾಡುವಂತಿಲ್ಲ

(3) ಅಸ್ಪೃಶ್ಯತೆಯನ್ನು ನಿಷೇಧಿಸಲಾಗಿದೆ ಮತ್ತು ಇದರ ಯಾವುದೇ ವಿಧದಲ್ಲಿನ ಆಚರಣೆಯು ಶಿಕ್ಷಾರ್ಹ ವಾದುದು

(4) ರಾಜ್ಯವು ಪರಿಸರ ಸಂರಕ್ಷಣೆ ಮತ್ತು ಸುಧಾರಣೆಗೆ ಬದ್ಧವಾಗಿದೆ

6. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿ ?

(1) ರಾಜ್ಯಸಭೆಗೆ ಆಯ್ಕೆಯಾದ ಸದಸ್ಯರುಗಳಿಂದ ರಾಜ್ಯಸಭೆಯ ಅಧ್ಯಕ್ಷರು ಆಯ್ಕೆಯಾಗುವರು

(2) ರಾಜ್ಯಸಭೆಯ ಅಧ್ಯಕ್ಷರು ಸಂಸತ್ತಿನ ಎರಡೂ ಸದನಗಳ ಜಂಟಿ ಅಧಿವೇಶನದ ಅಧ್ಯಕ್ಷತೆ ವಹಿಸುತ್ತಾರೆ

(3) ರಾಷ್ಟ್ರಪತಿಗಳ ಚುನಾವಣೆಯಲ್ಲಿಯಂತೆಯೇ ಉಪರಾಷ್ಟ್ರಪತಿಗಳ ಚುನಾವಣೆಯಲ್ಲಿಯೂ ಚುನಾವಣಾ ಮಂಡಳಿಯೂ ಒಂದೇ ಆಗಿರುತ್ತದೆ

(4) ಸಂಸತ್ತಿನ ಎರಡೂ ಸದನಗಳ ನಾಮನಿರ್ದೇಶಿತ ಸದಸ್ಯರುಗಳು ಉಪರಾಷ್ಟ್ರಪತಿಗಳ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರುತ್ತಾರೆ. ಆದರೆ ರಾಷ್ಟ್ರಪತಿಗಳ ಚುನಾವಣೆ ಯಲ್ಲಿ ಮತದಾನದ ಹಕ್ಕನ್ನು ಹೊಂದಿರುವುದಿಲ್ಲ

www.kpscvaani.com

7. ಕೆಳಗಿನ ಯಾವ ಸಮಿತಿಗಳು ರಾಜ್ಯ ಸಭೆಯಿಂದ ಸಹವರ್ತಿ ಸದಸ್ಯರಾಗಿರುತ್ತಾರೆ ?

(1) ಸಾರ್ವಜನಿಕ ಲೆಕ್ಕ ಸಮಿತಿ

(2) ಅಂದಾಜು ಸಮಿತಿ

(3) ಸೌಲಭ್ಯಗಳ ಮೇಲಣ ಸಮಿತಿ

(4) ಮೇಲಿನ ಎಲ್ಲವೂ

8. ಪಟ್ಟಿ I (ಯೋಜನೆಗಳು) ಮತ್ತು ಪಟ್ಟಿ II (ನದಿಗಳು) ಹೊಂದಿಸಿರಿ :

ಪಟ್ಟಿ I (ಯೋಜನೆಗಳು)	*ಪಟ್ಟಿ II (ನದಿಗಳು)*
A. ನಾಗಾರ್ಜುನ ಸಾಗರ	I. ಗೋದಾವರಿ
B. ಪೋಚಮಪಾಡ್	II. ಕೃಷ್ಣಾ
C. ಕಾಕ್ರಪಾರ್	III. ಮಹಾನದಿ
D. ಹಿರಾಕುಡ್	IV. ತಾಪಿ
	V. ಕಾವೇರಿ

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	III	I	V	II
(2)	II	I	IV	III
(3)	II	I	III	IV
(4)	II	III	I	V

9. ಪಟ್ಟಿ I (ಆದಿವಾಸಿ ಗುಂಪು) ಮತ್ತು ಪಟ್ಟಿ II (ರಾಜ್ಯಗಳು) ಹೊಂದಿಸಿರಿ :

ಪಟ್ಟಿ I (ಆದಿವಾಸಿ ಗುಂಪುಗಳು)	*ಪಟ್ಟಿ II (ರಾಜ್ಯಗಳು)*
A. ಅಂಗಾಮಿ	I. ಮಧ್ಯ ಪ್ರದೇಶ
B. ಬೈಗಾ	II. ನಾಗಾಲ್ಯಾಂಡ್
C. ಚುಟಿಯ	III. ತಮಿಳು ನಾಡು
D. ಯುರ್ವಾ	IV. ಅಸ್ಸಾಮ್

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	III	I	IV	II
(2)	II	I	IV	III
(3)	II	I	III	IV
(4)	II	III	I	IV

10. ಮಧ್ಯರಾತ್ರಿಯ ಕತ್ತಲೆಯಲ್ಲಿ ಕಾಂಗ್ರೆಸ ತೆವಳುತ್ತಿದ್ದಾಗ ಮಹಾತ್ಮ ಗಾಂಧೀಜಿ ರಾಜಕೀಯದಿಂದ ಹಿಂದೆ ಸರಿದು ಸಾಮಾಜಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು ಇದು ಭಾರತೀಯ ರಾಷ್ಟ್ರೀಯ ಚಳುವಳಿಯ ಯಾವ ಅವಧಿ ?

(1) ದುಂಡು ಮೇಜಿನ ಪರಿಷತ್ತಿನ ವೈಫಲ್ಯ ಮತ್ತು ತತ್ಪರಿಣಾಮ

(2) ಅಸಹಕಾರೋತ್ತರದ ಘಟ್ಟ

(3) 1930 ರ ವಿಶ್ವಾದ್ಯಂತದ ಜಾಗತಿಕ ಕುಸಿತ

(4) ಈ ಮೇಲಿನ ಯಾವುವೂ ಅಲ್ಲ

www.kpscvaani.com

11. ಕೆಲವು ಪ್ರಮುಖ ನಿಯತಕಾಲಿಕೆಗಳು ಮತ್ತು ವಾರ್ತಾಪತ್ರಿಕೆಗಳು ಹಾಗೂ ಅದರ ಕರ್ತೃಗಳನ್ನು ವಸಾಹತು ಅವಧಿಗೆ ಸಂಬಂಧಿಸಿದಂತೆ ನೀಡಲಾಗಿದೆ. ಈ ಪೈಕಿ ಸರಿಯಾದ ಜೋಡಿಯನ್ನು ಪತ್ತೆಮಾಡಿ :

A. ದ ಮದರ್ ಲ್ಯಾಂಡ್ : ಮಝರ್-ಉಲ್-ಹಕ್
B. ಅಲ ಹಿಲಾಲ : ಅಬುಲ್ ಕಲಾಂ ಆಜಾದ್
C. ಹಿಂದೂಸ್ತಾನ್ : ಎಮ್.ಎಮ್. ಮಾಳವೀಯ
D. ಬಾಂಬೆ ಕ್ರಾನಿಕಲ್ : ಸರ್ ಫಿರೋಜ ಷಾ ಮಹ್ತಾ

ಮೇಲಿನ ಯಾವ ಜೋಡಿ / ಗಳು ಸರಿ ?

ಸಂಕೇತದ ಮೂಲಕ ಸರಿ ಉತ್ತರವನ್ನು ಗುರ್ತಿಸಿ :

(1) A ಮಾತ್ರ
(2) B ಮತ್ತು C ಮಾತ್ರ
(3) C ಮತ್ತು D ಮಾತ್ರ
(4) A, B, C ಮತ್ತು D

12. ವಸಾಹತು ಅವಧಿಯಲ್ಲಿ ಕೆಲವು ಐತಿಹಾಸಿಕ ಪ್ರಮುಖ ಘಟನೆಗಳು ನಡೆದಿದ್ದು ಆ ಸಂದರ್ಭದಲ್ಲಿನ ಗವರ್ನರ್ ಜನರಲ್‌ಗಳ ಜೋಡಿಯನ್ನು ನೀಡಲಾಗಿದೆ :

A. ಸಿಮ್ಲಾ ಸಮಾವೇಶ : ವೇವೆಲ್
B. ಮೊಪ್ಲಾ ದಂಗೆ : ರೀಡಿಂಗ್
C. ಗ್ರಾಂಟಿಂಗ್ ಆಫ್ ಕಮ್ಯುನಲ್ ಅವಾರ್ಡ್ : ವಿಲ್ಲಿಂಗ್‌ಡನ್
D. ಪಾಕಿಸ್ತಾನ ಕ್ಕೆ ಮೊದಲ ಬೇಡಿಕೆ : ಲಿನ್ಲಿತ್‌ಗೋ 1942

ಮೇಲಿನ ಯಾವ ಜೋಡಿ / ಗಳು ಸರಿ ?

ಸಂಕೇತದ ಮೂಲಕ ಸರಿ ಉತ್ತರವನ್ನು ಗುರ್ತಿಸಿ :

(1) A ಮಾತ್ರ
(2) A ಮತ್ತು B ಮಾತ್ರ
(3) C ಮತ್ತು D ಮಾತ್ರ
(4) A, B, C ಮತ್ತು D

13. ಪಟ್ಟಿ I (ಹಕ್ಕಿಗಳು) ಮತ್ತು ಪಟ್ಟಿ II (ಅವುಗಳು ದೊರೆತ ಸ್ಥಳಗಳು) ಹೊಂದಿಸಿರಿ :

ಪಟ್ಟಿ I (ಹಕ್ಕಿಗಳು)		ಪಟ್ಟಿ II (ಅವುಗಳು ದೊರೆತ ಸ್ಥಳಗಳು)
A. ಆಸ್ಟ್ರಿಚ್	I.	ನ್ಯೂ ಜಿಲೆಂಡ್
B. ಎಮು	II.	ದಕ್ಷಿಣ ಅಮೇರಿಕಾ
C. ರ್ಹಿಯಾ	III.	ಆಫ್ರಿಕಾ
D. ಕಿವಿ	IV.	ಆಸ್ಟ್ರೇಲಿಯಾ

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	III	IV	II	I
(2)	IV	II	I	III
(3)	II	I	III	IV
(4)	IV	III	II	I

14. ಧ್ರುವ ನಕ್ಷತ್ರ ಚಲಿಸುವಂತೆ ತೋರುವುದಿಲ್ಲ ಏಕೆಂದರೆ
(1) ಅದು ಭೂಮಿಯ ಭ್ರಮಣ ಅಕ್ಷಕ್ಕೆ ರೇಖೀಯವಾಗಿದೆ.
(2) ಅದು ಸೂರ್ಯನ ಸುತ್ತ ಸುತ್ತುತ್ತದೆ, ಭೂಮಿಯ ಸುತ್ತಲೂ ಅಲ್ಲ.
(3) ಅದರ ಚಲನೆಯನ್ನು ಸೌರ ಗ್ರಹಣದ ಅವಧಿಯಲ್ಲಿ ಮಾತ್ರ ಕಾಣಬಹುದು.
(4) ಅದು ವೇಗವಾಗಿ ಭ್ರಮಿಸುತ್ತದೆ.

15. ಯಾವ ನಗರ ನಗರಗಳ ಗುಂಪು ಹೆಚ್ಚು ಕಡಿಮೆ ಅದೇ ಅಕ್ಷಾಂಶದಲ್ಲಿ ನೆಲೆಗೊಂಡಿವೆ ?
(1) ಕೊಚ್ಚಿ ಮಧುರೈ ಮತ್ತು ಥೂಥುಕುಡಿ
(2) ಮಂಗಳೂರು, ಬೆಂಗಳೂರು ಮತ್ತು ಚೆನ್ನೈ
(3) ಮುಂಬೈ, ಪುಣೆ ಮತ್ತು ಹೈದ್ರಾಬಾದ್
(4) ಸೂರತ್, ನಾಗಪುರ್ ಮತ್ತು ಕಾನ್‌ಪುರ್

www.kpscvaani.com

16. ಪಟ್ಟಿ I (ಕಾಯಿಲೆಗಳು) ಮತ್ತು ಪಟ್ಟಿ II (ಕಾಯಿಲೆಯಬಗೆ) ಆಧರಿಸಿ ಹೊಂದಿಸಿರಿ :

ಪಟ್ಟಿ I (ಕಾಯಿಲೆ)		ಪಟ್ಟಿ II (ಕಾಯಿಲೆಬಗೆ)
A. ಹೆಮೋಫಿಲಿಯಾ	I.	ಹಾರ್ಮೋನು ಏರುಪೇರು
B. ಮಧುಮೇಹ	II.	ವಂಶವಾಹಿ ಕಾಯಿಲೆ
C. ರಿಕೆಟ್ಸ್	III.	ಶಿಲೀಂಧ್ರ ಸೋಂಕು
D. ರಿಂಗ್ ವರ್ಮ್	IV.	ಕೊರತೆಯಿಂದಾಗುವ ಕಾಯಿಲೆ

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	II	III	I	IV
(2)	II	I	IV	III
(3)	I	II	III	IV
(4)	I	II	IV	III

17. ಕಿಣ್ವಗಳು ಮತ್ತು ಪ್ರೋಟೀನ್‌ಗಳಿಗೆ ಸಂಬಂಧಿಸಿದಂತೆ ಈ ಹೇಳಿಕೆ ಗಳನ್ನು ಪರಿಗಣಿಸಿ ಈ ಕೆಳಗಿನಂತೆ ಕಿಣ್ವಗಳು ಮತ್ತು ಪ್ರೋಟೀನ್‌ಗಳು ಪರಸ್ಪರ ಹೀಗೆ ಸಂಬಂಧಿಸಿವೆ

A. ಎಲ್ಲ ಪ್ರೋಟೀನ್‌ಗಳು ಕಿಣ್ವಗಳು.

B. ಎಲ್ಲ ಕಿಣ್ವಗಳೂ ಪ್ರೋಟೀನ್‌ಗಳು.

C. ಎಲ್ಲ ಕಿಣ್ವಗಳೂ ಪ್ರೋಟೀನ್‌ಗಳಲ್ಲ.

D. ಎಲ್ಲ ಪ್ರೋಟೀನ್‌ಗಳು ಕಿಣ್ವಗಳಲ್ಲ.

ಮೇಲಿನ ಯಾವ ಹೇಳಿಕೆ / ಗಳು ಸರಿ ?

ಸಂಕೇತದ ಮೂಲಕ ಸರಿ ಉತ್ತರವನ್ನು ಗುರ್ತಿಸಿ :

(1) A ಮತ್ತು C ಮಾತ್ರ
(2) B ಮತ್ತು D ಮಾತ್ರ
(3) A, B ಮತ್ತು C ಮಾತ್ರ
(4) B, C ಮತ್ತು D ಮಾತ್ರ

18. ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ಮಲಾಲಾ ಯೂಸುಫಜೈ ಝೈರವರು ಇತ್ತೀಚೆಗೆ ಯಾವ ರಾಷ್ಟ್ರದ ಗೌರವಾನ್ವಿತ ಪೌರತ್ವವನ್ನು ಸ್ವೀಕರಿಸಿದರು ?

(1) ನಾರ್ವೆ
(2) ಕೆನಡಾ
(3) ಸ್ವಿಟ್ಜರ್‌ಲೆಂಡ್
(4) ದಕ್ಷಿಣಾ ಅಫ್ರಿಕಾ

19. "ಅಮ್ಮಕು ವಂದನಂ" ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಯಾವ ರಾಜ್ಯ ಸರ್ಕಾರವು ತಾಯಂದಿರ ಗೌರವ ಸೂಚಕವಾಗಿ ಶಾಲೆಗಳಲ್ಲಿ ಜಾರಿಗೆ ತಂದಿತು ?

(1) ಕರ್ನಾಟಕ
(2) ಆಂಧ್ರ ಪ್ರದೇಶ್
(3) ಕೇರಳ
(4) ತಮಿಳುನಾಡು

20. ನೈಜ ಕರೆನ್ಸಿಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಚೌಕಟ್ಟುಗಳ ಪರೀಕ್ಷೆಗಾಗಿ ಕೇಂದ್ರ ಸರ್ಕಾರವು ಯಾವ ಸಮಿತಿಯನ್ನು ರಚಿಸಿತು ?

(1) ದಿನೇಶ್ ಶರ್ಮಾ ಸಮಿತಿ
(2) ಶಕ್ತಿಕಾಂತ ದಾಸ ಸಮಿತಿ
(3) ಹೆಚ್.ಆರ್. ಖಾನ್ ಸಮಿತಿ
(4) ಬಿ.ಎಸ್. ಧನರಾಜ್ ಸಮಿತಿ

21. ಇತ್ತೀಚೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಂದ ಬಿಡುಗಡೆ ಯಾದ "ಮಾತೋಶ್ರೀ" ಎಂಬ ಪುಸ್ತಕದ ಲೇಖಕರು ಯಾರು ?

(1) ಸುಮಿತ್ರಾ ಮಹಾಜನ್
(2) ನರೇಂದ್ರ ಮೋದಿ
(3) ವೆಂಕಯ್ಯ ನಾಯ್ಡು
(4) ಸುಷ್ಮಾ ಸ್ವರಾಜ್

22. ಕೇಂದ್ರ ಸರ್ಕಾರವು ಯಾವ ವಲಯದಲ್ಲಿ 'ಸಂಪದ' ಯೋಜನೆಯನ್ನು ಜಾರಿಗೆ ತರಲು ಯೋಜಿಸಿದೆ ?

(1) ಗಣಿ
(2) ಶಿಕ್ಷಣ
(3) ಆಹಾರ ಸಂಸ್ಕರಣ
(4) ಪ್ರವಾಸೋದ್ಯಮ

www.kpscvaani.com

23. ಡಿಜಿಟಲ್ ಆರ್ಥಿಕತೆಯನ್ನು ಕುರಿತಂತೆ ಮೊಟ್ಟಮೊದಲ G20 ಡಿಜಿಟಲ್ ಸಚಿವಾಲಯದ ಸಭೆಯು ಯಾವ ದೇಶದಲ್ಲಿ ಜರುಗಿತು ?
(1) ಜಪಾನ್
(2) ಭಾರತ
(3) ರಷ್ಯಾ
(4) ಜರ್ಮನಿ

24. ICC ಚಾಂಪಿಯನ್ಸ್ ಪಾರಿತೋಷಕ, 2017 ಕ್ಕಾಗಿ ಅಧಿಕೃತ ನಾವೀನ್ಯ ಪಾಲುದಾರರನ್ನಾಗಿ ಯಾವ ಕಂಪನಿಯನ್ನು ಹೆಸರಿಸಲಾಯಿತು ?
(1) ರಿಲಯನ್ಸ್
(2) ಐ.ಬಿ.ಎಮ್.
(3) ಗೂಗಲ್
(4) ಇಂಟೆಲ್

25. ಅನ್ನಪೂರ್ಣ ಭೋಜನಾಲಯಗಳೆಂಬ ಅಗ್ಗದ ಬೆಲೆಯ ಆಹಾರ ಕ್ಯಾಂಟೀನ್‌ಗಳನ್ನು ಯಾವ ರಾಜ್ಯ ಸರ್ಕಾರವು ಜಾರಿಗೆ ತರಲು ಯೋಜಿಸಿದೆ ?
(1) ಹರಿಯಾಣ
(2) ಮಣಿಪುರ್
(3) ಉತ್ತರ ಪ್ರದೇಶ
(4) ಅಸ್ಸಾಂ

26. ಭಾರತದ ಪ್ರಥಮ ಎನ್.ಬಿ.ಎ. ಬ್ಯಾಸ್ಕೆಟ್ ಬಾಲ್ ಶಾಲೆಯು ಯಾವ ನಗರದಲ್ಲಿ ಪ್ರಾರಂಭವಾಯಿತು ?
(1) ಜೈಪುರ್
(2) ಪೂನಾ
(3) ಮುಂಬಯಿ
(4) ರಾಜ್‌ಕೋಟ್

27. 100 ವರ್ಷಗಳ ಐತಿಹಾಸಿಕ ಚಂಪಾರಣ್ ಸತ್ಯಾಗ್ರಹದ ಸ್ಮರಣಾರ್ಥ ಇತ್ತೀಚೆಗೆ ಯಾವ ರಾಜ್ಯದಲ್ಲಿ "ಸ್ವಚ್ಛಗ್ರಹ - ಬಾಪೂ ಕೋ ಕಾವ್ಯಾಂಜಲಿ" ಎಂಬ ಶೀರ್ಷಿಕೆಯ ಪ್ರದರ್ಶನವನ್ನು ಉದ್ಘಾಟಿಸಲಾಯಿತು ?
(1) ಕಾನ್‌ಪುರ್
(2) ಪೋರ್‌ಬಂದರ್
(3) ಲಕ್ನೋ
(4) ನವ ದೆಹಲಿ

28. IPL ಗೆ ಸಂಬಂಧಿಸಿದಂತೆ ಪಟ್ಟಿ I ಯಲ್ಲಿನ ಆಟಗಾರರೊಂದಿಗೆ ಪಟ್ಟಿ II ಯ ತಂಡಗಳನ್ನು ಹೊಂದಿಸಿ :

ಪಟ್ಟಿ I (ಐ.ಪಿ.ಎಲ್. ಆಟಗಾರರು)		ಪಟ್ಟಿ II (ತಂಡಗಳು)
A. ಹಾಶಿಂ ಆಮ್ಲಾ	I.	ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್
B. ಬೆನ್ ಸ್ಟೋಕ್ಸ್	II.	ಕಿಂಗ್ಸ್ XI ಪಂಜಾಬ್
C. ಕ್ರಿಸ್ ಗೇಲ್	III.	ಕೊಲ್ಕತ್ತಾ ನೈಟ್ ರೈಡರ್ಸ್
D. ಸುನಿಲ್ ನರೈನ್	IV.	ರಾಯಲ್ ಚಾಲೆಂಜರ್ಸ ಬೆಂಗಳೂರು
	V.	ಗುಜರಾತ್ ಲಯನ್ಸ್

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	V	I	IV	III
(2)	II	I	IV	III
(3)	II	I	IV	V
(4)	I	II	IV	V

29. ಭಾರತದ ಯಾವ ರಾಜ್ಯದಲ್ಲಿ "ನೊಮಾಡಿಕ್ ಆನೆ" ಎಂಬ ಇಂಡೋ ಮಂಗೋಲಿಯನ್ ಜಂಟಿ ಮಿಲಿಟರಿ ಕಾರ್ಯಚರಣೆಯ 12 ನೇ ಆವೃತ್ತಿಯು ನಡೆಯಿತು ?
(1) ಮಿಜೋರಾಂ
(2) ಉತ್ತರಾಖಂಡ್
(3) ತಮಿಳು ನಾಡು
(4) ಕೇರಳ

30. ವಿದ್ಯುತಮಗ್ಗಗಳ ವಲಯದ ಪುನರುಜ್ಜೀವನಕ್ಕಾಗಿ "ಪವರ್‌ಟೆಕ್ಸ್" ಎಂಬ ಯೋಜನೆಯನ್ನು ಭಾರತದ ಯಾವ ಕೇಂದ್ರ ಸಚಿವರು ಜಾರಿಗೆ ತಂದರು ?
(1) ಸ್ಮೃತಿ ಇರಾನಿ
(2) ರಾಜ್‌ನಾಥ್ ಸಿಂಗ್
(3) ಅರುಣ್ ಜೇಟ್ಲಿ
(4) ನರೇಂದ್ರ ಮೋದಿ

www.kpscvaani.com

31. ಭಕ್ತಿ ಪಂಥದ ಮುಖ್ಯ ಸಂತರುಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿ :

A. ವಲ್ಲಭಾಚಾರ್ಯ

B. ರಾಮಾನುಜ

C. ನಿಂಬಾರಕಾ

D. ಮಧ್ವ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) B, C, D, A

(2) A, C, D, B

(3) B, A, D, C

(4) A, B, C, D

32. ವಿಜಯನಗರದ ಸಾಮ್ರಾಜ್ಯದ ದೊರೆಗಳಲ್ಲಿ ಯಾವ ಕೆಳಗಿನ ದೊರೆಯು ಆತನ ಸೈನ್ಯದಲ್ಲಿ ಮುಸ್ಲಿಂರನ್ನು ನೇಮಿಸಿಕೊಂಡಿದ್ದನು, ಅವರಿಗೆ ಭೂಮಿಯನ್ನು ನೀಡಿದ್ದನು, ಮಸೀದಿಯನ್ನ ಕಟ್ಟಿದ್ದರು ಮತ್ತು ತನ್ನ ಸಿಂಹಾಸನದ ಮುಂದೆ ಪವಿತ್ರ ಕುರಾನ್‌ನ್ನು ಇಟ್ಟುಕೊಂಡಿದ್ದರು ?

(1) I ನೇ ಹರಿಹರ

(2) I ನೇ ದೇವರಾಯ

(3) II ನೇ ದೇವರಾಯ

(4) ಕೃಷ್ಣದೇವರಾಯ

33. ಕರ್ನಾಟಕ ರಾಜ್ಯದ ಯಾವ ಜಿಲ್ಲೆಯು ಕಿತ್ತಳೆ ನಾಡು ಎಂತಲೂ ಕರೆಸಿಕೊಂಡಿದೆ ?

(1) ಚಿಕ್ಕಮಗಳೂರು

(2) ಶಿವಮೊಗ್ಗ

(3) ಕೊಡಗು

(4) ಉತ್ತರ ಕನ್ನಡ

34. (ಚಾಹಲ್‌ಗನಿ) 40 ಟರ್ಕ್ ನೋಬಲ್‌ಗಳ ದಳಗಳು ರೂಪುಗೊಂಡಿದ್ದು ಇವರಿಂದ

(1) ರಝಿಯಾ ಸುಲ್ತಾನ್

(2) ಬಲ್ಬನ್

(3) ಕುತ್ಬುದ್ದೀನ್ ಐಬಕ್

(4) ಇಲ್ತಮಿಷ್

35. "ಅಭಂಗಗಳು" ಎಂಬ ಭಕ್ತಿ ಗೀತೆಗಳನ್ನು ರಚಿಸಿದವರಾರು ?

(1) ಕಬೀರ್

(2) ಸಂತ ತುಕಾರಾಂ

(3) ಸಂತ ರವಿದಾಸ್

(4) ಗುರು ರಾಮ್‌ದಾಸ್

36. ಈ ಕೆಳಗಿನ ಯಾವ ಸ್ಥಳದಲ್ಲಿ ಕರ್ನಾಟಕ ಏಕೀಕರಣ ಸಭೆಯು ಸ್ಥಾಪಿಸಲ್ಪಟ್ಟಿತು ?

(1) ಧಾರವಾಡ

(2) ಬೆಳಗಾಂ

(3) ಬೆಂಗಳೂರು

(4) ಬೀದರ್

37. ಅಕ್ಬರನ ವಿರುದ್ಧ ಧೈರ್ಯವಾಗಿ ಹೋರಾಡಿದ ಪ್ರಖ್ಯಾತ ರಾಣಿ ಚಾಂದ್ ಬೀಬಿಯು ಕೆಳಗಿನ ಯಾವ ರಾಜ್ಯಕ್ಕೆ ಸೇರಿದವಳು ?

(1) ಬೀರಾರ್

(2) ಖಾಂದೇಶ್

(3) ಅಹ್ಮದ್‌ನಗರ

(4) ಬಿಜಾಪುರ್

www.kpscvaani.com

38. "ಎದ್ದು ನಿಲ್ಲು ಭಾರತ" ಯೋಜನೆಯಡಿ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಈ ಯೋಜನೆಯು ಪ್ರತಿ ಬ್ಯಾಂಕ್ ಶಾಖೆಯ ಪ.ಜಾ./ಪ.ಪಂ. ಮತ್ತು ಮಹಿಳಾ ಉದ್ಯಮಶೀಲರಿಗೆ ಮಾತ್ರ ಸಹಾಯ ಮಾಡುವ ಉದ್ದೇಶವನ್ನು ಹೊಂದಿದೆ.

B. ಕನಿಷ್ಠ ಒಂದು ಬ್ಯಾಂಕ್ ವಿಭಾಗದ ಒಬ್ಬ ಮಹಿಳಾ ಉದ್ಯಮಿಗೆ ಬೆಂಬಲ ನೀಡುವುದು.

C. ಹಸಿರು ಕ್ಷೇತ್ರ ಉದ್ಯಮಶೀಲತೆಗೆ ಮಾತ್ರ ಇದರ ಬೆಂಬಲ ಲಭ್ಯವಿದೆ.

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A, B ಮತ್ತು C

(2) A ಮತ್ತು C ಮಾತ್ರ

(3) A ಮಾತ್ರ

(4) B ಮತ್ತು C ಮಾತ್ರ

39. ಈ ಕೆಳಗಿನದರಲ್ಲಿ ತೊಡಗಿಕೊಳ್ಳುವ ರಾಜ್ಯಗಳ ಪರಿಸ್ಥಿತಿಗೆ ಕರೆನ್ಸಿ ಯುದ್ಧವು ಸಂಬಂಧಿಸಿದೆ

(1) ಡಾಲರ್‌ಗಳ ಸಂಗ್ರಹಣೆ

(2) ಚಿನ್ನದ ಶೇಖರಣೆ

(3) ತಮ್ಮ ಕರೆನ್ಸಿಗಳ ಅಪಮೌಲ್ಯ ಮಾಡುವಿಕೆ

(4) ತಮ್ಮ ಕರೆನ್ಸಿಗಳ ಮುಕ್ತ ಪರಿವರ್ತನೆಯನ್ನು ಒಪ್ಪಿಕೊಳ್ಳುವುದು

40. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ರಿಸರ್ವ ಬ್ಯಾಂಕ್ ಆಫ್ ಇಂಡಿಯಾದ ಕಾರ್ಯಗಳು ಇದನ್ನು ಒಳಗೊಳ್ಳುವುದಿಲ್ಲ :

A. ತೆರೆದ ಮಾರುಕಟ್ಟೆ ಕಾರ್ಯಾಚರಣೆಗಳು.

B. ಆದಾಯ ಸಂಗ್ರಹಣೆಯ ಮೇಲ್ವಿಚಾರಣೆ.

C. ನಾನ್ ಬ್ಯಾಂಕಿಂಗ್ ಹಣಕಾಸು ಕಂಪನಿಗಳ ಮೇಲ್ವಿಚಾರಣೆ.

D. ಸಾರ್ವಜನಿಕ ವೆಚ್ಚದ ಮರುಪರಿಶೀಲನೆ.

ಮೇಲೆ ನೀಡಿರುವ ಹೇಳಿಕೆ / ಗಳಲ್ಲಿ ಯಾವುದು ಸರಿಯಾಗಿದೆ / ವೆ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ

(2) B ಮತ್ತು D ಮಾತ್ರ

(3) A, B ಮತ್ತು D ಮಾತ್ರ

(4) A, B, C ಮತ್ತು D

41. 2011 ರ ಜನಗಣತಿಯ ಮೇರೆಗೆ ಎಲ್ಲ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಾಕ್ಷರತೆಯಲ್ಲಿ 3 ಉನ್ನತ ಸ್ಥಾನವನ್ನು ಪಡೆದಿರುವಂತವುಗಳೆಂದರೆ :

(1) ಕೇರಳ, ಪಶ್ಚಿಮ ಬಂಗಾಳ, ಗೋವಾ

(2) ಮಿಜೋರಾಂ, ಕೇರಳ, ತ್ರಿಪುರ

(3) ಕೇರಳ, ಲಕ್ಷದ್ವೀಪ್, ಮಿಜೋರಾಂ

(4) ಚಂಡೀಗಢ್, ಕೇರಳ, ಗೋವಾ

www.kpscvaani.com

42. 2011 ರ ಜನಗಣತಿಯ ಮೇರೆಗೆ ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚು ಅನುಕೂಲಕರ ಲಿಂಗಾನುಪಾತವನ್ನು ಹೊಂದಿದ ರಾಜ್ಯಗಳು ಯಾವುವೆಂದರೆ :

(1) ಕೇರಳ, ಒರಿಸ್ಸಾ, ಗೋವಾ ಮತ್ತು ತಮಿಳುನಾಡು

(2) ಹಿಮಾಚಲ ಪ್ರದೇಶ್, ಆಂಧ್ರ ಪ್ರದೇಶ್, ಪಂಜಾಬ್ ಮತ್ತು ಗುಜರಾತ್

(3) ಹರಿಯಾಣ, ರಾಜಸ್ಥಾನ, ಪಂಜಾಬ್ ಮತ್ತು ಗುಜರಾತ್

(4) ಕೇರಳ, ಉತ್ತರ ಪ್ರದೇಶ್, ಆಂಧ್ರ ಪ್ರದೇಶ್ ಮತ್ತು ತಮಿಳುನಾಡು

43. ಭಾರತ ಸರ್ಕಾರವು e-ಬಿಜ್ ಪೋರ್ಟಲ್‌ನ್ನು G2B (ಸರ್ಕಾರ ದಿಂದ ವ್ಯವಹಾರ) ಸೇವೆಗಳಿಗಾಗಿ, ಇನ್‌ಫೋಸಿಸ್ ನೊಂದಿಗೆ ಖಾಸಗಿ ಸಾರ್ವಜನಿಕ ಪಾಲುದಾರಿಕೆ ಸಾಹಸೋದ್ಯಮವಾಗಿ ಜಾರಿಗೆ ತಂದಿತು. ಈ ಕೆಳಗಿನ ಯಾವ ಸೇವೆಗಳು ಈ ಪೋರ್ಟಲ್‌ನ ವ್ಯಾಪ್ತಿಗೆ ಬರುವುದಿಲ್ಲ?

(1) ಕ್ಲಿಯರೆನ್ಸ್‌ಗಳನ್ನು (ಸ್ಪಷ್ಟೀಕರಣ) ಪಡೆಯುವುದು

(2) ಮಾರುಕಟ್ಟೆ ಬೆಂಬಲ

(3) ಪರವಾನಗಿಗಳ ಜಾರಿ

(4) ತೆರಿಗೆ ಪ್ರಾಧಿಕಾರಗಳೊಡನೆ ನೋಂದಣಿ

44. ಆರ್ಥಿಕ ಅಭಿವೃದ್ಧಿಯಿಂದ ಆರ್ಥಿಕ ಬೆಳವಣಿಗೆಯನ್ನು ಪ್ರತ್ಯೇಕಿಸುವ ಇತ್ತೀಚಿನ ಸೂಚ್ಯವೆಂದರೆ ಯಾವುದಾಗಿದೆ ?

(1) ತಲಾ ಆದಾಯದಲ್ಲಿನ ಹೆಚ್ಚಳ

(2) ಸಂಸ್ಥೆಗಳು ಮತ್ತು ಧೋರಣೆಗಳಲ್ಲಿನ ಬದಲಾವಣೆಗಳು

(3) ಪರಿಸರ ವಿಜ್ಞಾನ ಮತ್ತು ಪರಿಸರಕ್ಕಾಗಿ ಕಾಳಜಿ

(4) ಮೇಲಿನ ಎಲ್ಲವೂ

45. ಕೇಂದ್ರ ಲೋಕ ಸೇವಾ ಆಯೋಗದ ಬಗ್ಗೆ (UPSC) ಈ ಕೆಳಗಿನ ಯಾವ ಹೇಳಿಕೆಯು ಸರಿಯಾಗಿಲ್ಲ?

A. ಕೇ.ಲೋ.ಸೇ.ಆ.ವು ತನ್ನ ವಾರ್ಷಿಕ ವರದಿಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸುತ್ತದೆ.

B. ಕೇ.ಲೋ.ಸೇ.ಆ.ದ ಅಧ್ಯಕ್ಷರನ್ನು ಕೇಂದ್ರ ಸರ್ಕಾರದ ಆದೇಶದಿಂದ ತೆಗೆದು ಹಾಕಬಹುದು.

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಎರಡೂ

(4) A ಆಥವಾ B ಆಗಲೀ ಅಲ್ಲ

46. ದ್ವಿಮುಖ ಆರ್ಥಿಕತೆ ಎಂದರೆ

A. ಕಪ್ಪು ಹಣ ಮತ್ತು ಬಿಳಿಯ ಹಣಗಳು ಅಸ್ತಿತ್ವದಲ್ಲಿರುವುದು.

B. ಕೃಷಿ ಮತ್ತು ಕೈಗಾರಿಕೆಯು ಅಸ್ತಿತ್ವದಲ್ಲಿರುವುದು.

C. ವಾಣಿಜ್ಯಾತ್ಮಕ ಕೃಷಿಯೊಂದಿಗೆ ಜೀವನಾಧಾರ ವ್ಯವಸಾಯ ಅಸ್ತಿತ್ವದಲ್ಲಿರುವುದು.

D. ಆಧುನಿಕ ಕೈಗಾರಿಕೆ ಮತ್ತು ವಾಣಿಜ್ಯ ಕೃಷಿಗಳು ಜೀವನಾಧಾರ ವ್ಯವಸಾಯ ಮತ್ತು ಸಾಂಪ್ರದಾಯಿಕ ಕರಕುಶಲತೆಗಳೊಂದಿಗೆ ಸಹ (ಬಾಳ್ವೆ) ಅಸ್ತಿತ್ವದಲ್ಲಿರುವುದು.

ಮೇಲಿನ ಯಾವ ಹೇಳಿಕೆ / ಗಳು ಸರಿ ?

ಸಂಕೇತದ ಮೂಲಕ ಸರಿ ಉತ್ತರವನ್ನು ಗುರ್ತಿಸಿ :

(1) A ಮಾತ್ರ

(2) A, B ಮತ್ತು D ಮಾತ್ರ

(3) B, C ಮತ್ತು D ಮಾತ್ರ

(4) A, B, C ಮತ್ತು D

www.kpscvaani.com

47. ಅಕ್ಬರ್‌ನ ಆಳ್ವಿಕೆಯ ಅವಧಿಯಲ್ಲಿ ಕೆಳಕಂಡ ಯಾವ ವರ್ಣಚಿತ್ರಕಾರನಿಗೆ "ಶಿರೀನ್ ಖ್ವಾಲಂ" ಎಂಬ ಬಿರುದನ್ನು ನೀಡಲಾಗಿತ್ತು ?

(1) ಮೀರ್ ಸಯ್ಯದ್ ಅಲಿ

(2) ಅಬ್ದುಸ್ ಸಮದ್

(3) ಮುಕುಂದ್

(4) ದಸವಂತ್

48. ಕರ್ನಾಟಕದ ಯಾವ ಜಿಲ್ಲೆಯು ಒಣ ಮೆಣಸಿನಕಾಯಿಗಳ ಉತ್ಪಾದನೆಯಲ್ಲಿ ದೊಡ್ಡದಾದ ಕ್ಷೇತ್ರವನ್ನು ಹೊಂದಿದೆ ?

(1) ಬಾಗಲ್ಕೋಟ್

(2) ಗದಗ

(3) ಧಾರವಾಡ

(4) ಬಳ್ಳಾರಿ

49. ಕರ್ನಾಟಕದಲ್ಲಿನ ದೋಣಿಮಲೈ ಎಂಬ ಸ್ಥಳವು ಇದಕ್ಕಾಗಿ ಪ್ರಸಿದ್ಧವಾಗಿದೆ

(1) ಮ್ಯಾಂಗನೀಸ್ ನಿಕ್ಷೇಪಗಳು

(2) ಕಬ್ಬಿಣದ ಅದಿರಿನ ನಿಕ್ಷೇಪಗಳು

(3) ಚಿನ್ನದ ನಿಕ್ಷೇಪಗಳು

(4) ಬಾಕ್ಸೈಟ್ ನಿಕ್ಷೇಪಗಳು

50. ವಿಂಬಲ್ಡನ್‌ನ ಪುರುಷರ ಸಿಂಗಲ್ ವಿಂಬಲ್ಡನ್ ಸೆಮಿ ಫೈನಲ್ಸ್‌ಗೆ ಎರಡು ಬಾರಿ ತಲುಪಿದ ಒಬ್ಬರೇ ಭಾರತೀಯ ಟೆನಿಸ್ ಆಟಗಾರ ಯಾರು ?

(1) ಜಯದೀಪ್ ಮುಖರ್ಜಿ

(2) ವಿಜಯ್ ಅಮೃತ್‌ರಾಜ್

(3) ರಾಮನಾಥನ್ ಕೃಷ್ಣನ್

(4) ಲಿಯಾಂಡರ್ ಪೇಸ್

51. ಭಾರತದ ಪ್ರಖ್ಯಾತ ಅಥ್ಲೀಟ್‌ಗಳಲ್ಲಿ ಒಬ್ಬರು ಅಂಜು ಬಾಬಿ ಜಾರ್ಜ್. ಇವರು ಭಾಗವಹಿಸಿದ ಪಂದ್ಯಾವಳಿ ಯಾವುದು ?

(1) ಹರ್ಡಲ್ಸ್

(2) ಡಿಸ್ಕಸ್

(3) ಲಾಂಗ್ ಜಂಪ್

(4) 200 ಮೀಟರ್‌ಗಳ ಓಟ

52. ಭಾರತ ಸರ್ಕಾರವು ಸೈನ್ಯದಳದಲ್ಲಿರುವ, ಯುದ್ಧಕಾಲದಲ್ಲಿ ಮಾಡಿದ ಸೇವೆ ಮತ್ತು ಶಾಂತಿ ಸಮಯದಲ್ಲಿ ಮಾಡಿದ ಸೇವೆ ಎರಡನ್ನೂ ಪರಿಗಣಿಸಿ ಪ್ರಶಸ್ತಿಗಳನ್ನು ನೀಡುವುದು. ಕೆಳಗಿನವುಗಳಲ್ಲಿ ಯಾವ ಪ್ರಶಸ್ತಿಯು ಶಾಂತಿ ಕಾಲದ ಶೌರ್ಯ ಪ್ರಶಸ್ತಿಯಾಗಿದೆ ?

(1) ವೀರ ಚಕ್ರ

(2) ಪರಮ ವೀರ ಚಕ್ರ

(3) ಶೌರ್ಯ ಚಕ್ರ

(4) ಮಹಾವೀರ ಚಕ್ರ

www.kpscvaani.com

53. 2014 ನೇ ಸಾಲಿನಲ್ಲಿ ಕೈಲಾಶ್ ಸತ್ಯಾರ್ಥಿಯು ನೊಬೆಲ್ ಶಾಂತಿ ಬಹುಮಾನವನ್ನು ಗೆದ್ದರು. ಇವರು ಮಕ್ಕಳ ಸುರಕ್ಷತೆಗಾಗಿ ಒಂದು ಚಳುವಳಿಯನ್ನು ಪ್ರಾರಂಭಿಸಿದರು. ಇದರ ಹೆಸರೇನು ?

(1) "ಶಿಕ್ಷಣದ ಮುಖಾಂತರ ಮಂದಹಾಸವನ್ನು" ಹರಡುವುದು

(2) ಮುಗುವಿನ ನೆಮ್ಮದಿ ಮತ್ತು ನೀನು (ಕೈ) ಭಾರತ

(3) ಬಚ್‌ಪನ್ (ಬಾಲ್ಯ) ಬಚಾವೋ (ಉಳಿಸಿ) ಆಂದೋಳನ

(4) ಫ್ಲೈಯಿಂಗ್ ಇಂಡಿಯಾ

54. ಕೆಳಗಿನ ಯಾವ ಸಮೂಹದಲ್ಲಿ ತಾಮ್ರ - ಚಿನ್ನ - ಕಬ್ಬಿಣ - ಕಲ್ಲಿದ್ದಲು ಇವುಗಳು ಕೆಳಗಿನ ಗಣಗಳಲ್ಲಿ ಇದೇ ಕ್ರಮದಲ್ಲಿ ಸಂಬಂಧಿಸಿವೆ ?

(1) ಕೋಲಾರ್ - ಕುದುರೇಮುಖ - ಖೇತ್ರಿ - ಝರಿಯಾ

(2) ಖೇತ್ರಿ - ಕೋಲಾರ್ - ಕುದುರೇಮುಖ - ಝರಿಯಾ

(3) ಕುದುರೇಮುಖ್ - ಕೋಲಾರ್ - ಖೇತ್ರಿ - ಝರಿಯಾ

(4) ಕೋಲಾರ್ - ಖೇತ್ರಿ - ಝರಿಯಾ - ಕುದುರೇಮುಖ

55. ಜರ್ಮನ್ ಸಹಯೋಗದೊಂದಿಗೆ ಸ್ಥಾಪಿತವಾಗಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಯಾವುದು ?

(1) TISCO, ಜಮ್‌ಷೆಡಪುರ್

(2) ರೂರ್ಕೆಲಾ ಉಕ್ಕಿನ ಸ್ಥಾವರ (RSP)

(3) HSL, ಭಿಲಾಯ್

(4) HSL, ದುರ್ಗಾಪುರ್

56. ಪಟ್ಟಿ I (ಪುಸ್ತಕಗಳನ್ನು) ಮತ್ತು ಪಟ್ಟಿ II (ಲೇಖಕರೊಂದಿಗೆ) ಹೊಂದಿಸಿರಿ :

ಪಟ್ಟಿ I (ಪುಸ್ತಕಗಳು)		*ಪಟ್ಟಿ II (ಲೇಖಕರು)*
A. ಅಡ್ವೆಂಚರ್ಸ್ ಆಫ್ ಟಾಂ ಸಾಯರ್	I.	ಕಾಂಟ್
B. ದಿ ಕ್ರಿಟಿಕ್ ಆಫ್ ಪ್ಯೂರ್ ರೀಸನ್	II.	ಮಾರ್ಕ್ ಟ್ವೈನ್
C. ಎ ಸೂಟಬಲ್ ಬಾಯ್	III.	ಲೂಯಿಸ್ ಕರೋಲ್
D. ಆಲಿಸ್ ಇನ್ ವಂಡರ್‌ಲ್ಯಾಂಡ್	IV.	ವಿಕ್ರಂ ಸೇಠ್

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	IV	III	II	I
(2)	II	I	IV	III
(3)	I	II	III	IV
(4)	IV	III	I	II

57. ಅಮೇರಿಕಾ ಸಂಯುಕ್ತ ಸಂಸ್ಥಾನದ ಯಾವ ನಗರವು ದಿ "ಸಿಟಿ ಬೈ ದಿ ಬೈ" ಎಂದು ಕರೆಸಿಕೊಳ್ಳಲ್ಪಟ್ಟಿದೆ ?

(1) ಚಿಕಾಗೋ

(2) ನ್ಯೂಯಾರ್ಕ್

(3) ಸ್ಯಾನ್ ಫ್ರಾನ್ಸಿಸ್ಕೋ

(4) ವಾಷಿಂಗ್ಟನ್ ಡಿ.ಸಿ.

www.kpscvaani.com

58. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ :

A. ಶ್ರೀಮಂತರು ಮಾತ್ರವೇ ವಾಯುಯಾನಕ್ಕೆ ಸಮರ್ಥರಾಗುತ್ತಾರೆ.

B. ವಾಯುಯಾನ ಮಾಡುವ ಕೆಲವರು ರೋಗಗ್ರಸ್ತರಾಗುವರು.

C. ರೋಗಗ್ರಸ್ತರಾಗುವವರಲ್ಲಿ ಕೆಲವರಿಗೆ ಚಿಕಿತ್ಸೆಯ ಅವಶ್ಯಕತೆಯಿದೆ.

ಮೇಲಿನ ಹೇಳಿಕೆಗಳಿಂದ ಕೆಳಗಿನ ಯಾವ ತೀರ್ಮಾನವನ್ನು ಕೈಗೊಳ್ಳಬಹುದು ?

(1) ಎಲ್ಲಾ ಶ್ರೀಮಂತ ವ್ಯಕ್ತಿಗಳು ವಾಯುಯಾನವನ್ನು ಮಾಡುತ್ತಾರೆ.

(2) ವಾಯುಯಾನ ಮಾಡುವವರು ರೋಗಕ್ಕೆ ತುತ್ತಾಗುತ್ತಾರೆ.

(3) ಎಲ್ಲಾ ಶ್ರೀಮಂತ ವ್ಯಕ್ತಿಗಳು ರೋಗಗ್ರಸ್ತರಾಗುತ್ತಾರೆ.

(4) ವಾಯುಯಾನ ಮಾಡುವವರೆಲ್ಲ ಶ್ರೀಮಂತರು.

59. ಎ, ಬಿ ಮತ್ತು ಸಿ ಎಂಬ ಮೂರು ವ್ಯಕ್ತಿಗಳು ಕಪ್ಪು, ನೀಲಿ ಮತ್ತು ಕಿತ್ತಳೆ ಬಣ್ಣಗಳ ಶರ್ಟ್ ಧರಿಸಿದ್ದರು (ಅಗತ್ಯವಾಗಿ ಆದೇ ಕ್ರಮದಲ್ಲಿ ಅಲ್ಲ) ಮತ್ತು ಹಸಿರು, ಹಳದಿ ಮತ್ತು ಕಿತ್ತಳೆ ಬಣ್ಣಗಳ ಪ್ಯಾಂಟ್ ಧರಿಸಿದ್ದರು. (ಅಗತ್ಯವಾಗಿ ಆದೇ ಕ್ರಮದಲ್ಲಿ ಅಲ್ಲ) ಯಾವುದೇ ವ್ಯಕ್ತಿ ಒಂದೇ ಬಣ್ಣದ ಶರ್ಟ ಮತ್ತು ಪ್ಯಾಂಟ್ ಧರಿಸಿಲ್ಲ.
ಎ ವ್ಯಕ್ತಿಯ ಕಪ್ಪು ಬಣ್ಣದ ಶರ್ಟ್ ಧರಿಸಿರಲಿಲ್ಲ.
ಬಿ ವ್ಯಕ್ತಿಯು ನೀಲಿ ಬಣ್ಣದ ಶರ್ಟ್ ಧರಿಸಿರಲಿಲ್ಲ.
ಸಿ ವ್ಯಕ್ತಿಯು ಕಿತ್ತಳೆ ಬಣ್ಣದ ಶರ್ಟ್ ಧರಿಸಿರಲಿಲ್ಲ.
ಎ ವ್ಯಕ್ತಿಯು ಹಸಿರು ಬಣ್ಣದ ಪ್ಯಾಂಟ್ ಧರಿಸಿರಲಿಲ್ಲ.
ಬಿ ವ್ಯಕ್ತಿಯ ಕಿತ್ತಳೆ ಬಣ್ಣದ ಪ್ಯಾಂಟ್ ಧರಿಸಿದ್ದರು.
ಸಿ ಯು ಧರಿಸುವ ಪ್ಯಾಂಟ್ ಮತ್ತು ಶರ್ಟ್‌ಗಳ ಬಣ್ಣಗಳು ಕ್ರಮವಾಗಿ

(1) ಕಿತ್ತಳೆ ಮತ್ತು ಕಪ್ಪು

(2) ಹಸಿರು ಮತ್ತು ನೀಲಿ

(3) ಹಳದಿ ಮತ್ತು ನೀಲಿ

(4) ಹಳದಿ ಮತ್ತು ಕಪ್ಪು

60. ಚಳಿಗಾಲದಲ್ಲಿ ಲಂಡನ್ನಿನ ಸರಾಸರಿ ಉಷ್ಣಾಂಶ 8°ಸೆ. ಆಗಿರುವುದು. ಬರ್ಲಿನ್‌ನಲ್ಲಿ ಇದು 5°ಸೆ. ಹಾಗೂ ಮಾಸ್ಕೋದಲ್ಲಿ –10°ಸೆ. ಆಗಿರುವುದು. ಈ ನಗರಗಳೆಲ್ಲವೂ ಒಂದೇ ಅಕ್ಷಾಂಶದಲ್ಲಿವೆ.
ಉಷ್ಣಾಂಶದ ಈ ಹೆಚ್ಚು ವ್ಯತ್ಯಾಸಗಳಿಗೆ ಕಾರಣ.

(1) ಸಮುದ್ರದಿಂದ ಇರುವ ದೂರ

(2) ಚಂಡಮಾರುತಗಳ ಪ್ರಭಾವ

(3) ಸೂರ್ಯ ಪ್ರಕಾಶದ (ಆ್ಯಸ್ಪೆಕ್ಟ್) ಪರಿಣಾಮ

(4) ಭೂ ಪ್ರದೇಶ ಹಿಮಾವೃತವಾಗಿರುವುದು

61. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಇದು ವಾಯುಮಂಡಲದ ಅತ್ಯಂತ ಕೆಳವಲಯ.

B. ಹವಾಮಾನದ ಬಹುತೇಕ ಎಲ್ಲಾ ಲಕ್ಷಣಗಳು ಈ ವಲಯಕ್ಕೆ ಸೀಮಿತ.

C. ಈ ವಲಯದಲ್ಲಿ ಸಾಮಾನ್ಯವಾಗಿ ಪ್ರತಿ 1000 ಮೀ ಎತ್ತರಕ್ಕೆ ಹೋದಂತೆ 6·5°ಸೆ. ಉಷ್ಣಾಂಶ ಕಡಿಮೆಯಾಗುವುದು.

ಟ್ರೋಪೋಸ್ಪಿಯರ್ (ಪರಿವರ್ತನಾಮಂಡಲಕ್ಕೆ) ಸಂಬಂಧಿಸಿದಂತೆ ಮೇಲಿನ ಯಾವ ಹೇಳಿಕೆಗಳು ಸರಿ :

(1) A ಮಾತ್ರ

(2) A ಮತ್ತು C ಮಾತ್ರ

(3) A, B ಹಾಗೂ C

(4) B ಮಾತ್ರ

62. ಧ್ರುವೀಯ ಪ್ರದೇಶದಲ್ಲಿ ನಡುರಾತ್ರಿಯಲ್ಲಿ ಸೂರ್ಯ ಈ ವಿದ್ಯಮಾನ ಕಂಡು ಬರುವುದು

(1) ವರ್ಷದ ಎಲ್ಲ ಕಾಲದಲ್ಲಿ

(2) ಚಳಿಗಾಲದ ಅವಧಿಯಲ್ಲಿ ಮಾತ್ರ

(3) ಮಳೆಗಾಲದ ಅವಧಿಯಲ್ಲಿ ಮಾತ್ರ

(4) ಬೇಸಿಗೆಯ ಅವಧಿಯಲ್ಲಿ ಮಾತ್ರ

www.kpscvaani.com

63. ಅಮೃತಶಿಲೆ ಯಾವುದಕ್ಕೆ ಉದಾಹರಣೆಯಾಗಿದೆ :

(1) ಅಗ್ನಿಶಿಲೆ

(2) ರೂಪಾಂತರ ಶಿಲೆ

(3) ಪದರು ಶಿಲೆ

(4) ಮೇಲಿನ ಯಾವುದು ಅಲ್ಲ

64. ಹೊಂದಿಸಿ ಬರೆಯರಿ :

ಪಟ್ಟಿ I (ಜ್ವಾಲಾಮುಖಿ)		ಪಟ್ಟಿ II (ದೇಶ)
A. ಶಾಸ್ತ	I.	ವೆಸ್ಟ್ ಇಂಡೀಸ್
B. ಕೋಟೋಪಾಕ್ಷಿ	II.	ಇಟಲಿ
C. ಪೀಲೆ	III.	ಈಕ್ವೆಡಾರ್
D. ವೆಸೂವಿಯಸ್	IV.	ಅಮೇರಿಕಾ ಸಯುಕ್ತೆ ಸಂಸ್ಥಾನ

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	IV	III	I	II
(2)	I	II	III	IV
(3)	II	I	IV	III
(4)	III	II	I	IV

65. ₹ 725 ಗಳನ್ನು ವರ್ಷದ ಆರಂಭದಲ್ಲಿ ಒಂದು ನಿರ್ದಿಷ್ಟ ವಾರ್ಷಿಕ ಬಡ್ಡಿದರದಲ್ಲಿ ಸಾಲ ನೀಡಲಾಗಿದೆ. 8 ತಿಂಗಳ ನಂತರ ₹ 362·50 ಗಳನ್ನು ಮತ್ತಷ್ಟು ಸಾಲ ನೀಡಲಾಗಿದೆ ಆದರೆ ವಾರ್ಷಿಕ ಮೂಲ ಬಡ್ಡಿದರದ ದ್ವಿಗುಣ ದರದಲ್ಲಿ, ವರ್ಷದ ಕೊನೆಯಲ್ಲಿ ಎರಡೂ ಸಾಲಗಳಿಂದ ₹ 33·50 ಬಡ್ಡಿಯನ್ನು ಗಳಿಸಲಾಗಿದೆ ಮೂಲ ಬಡ್ಡಿದರವು ವರ್ಷಕ್ಕೆ ಎಷ್ಟಾಗಿತ್ತು ?

(1) 3·56%

(2) 3·46%

(3) 4·56%

(4) 4·65%

66. ಒಂದು ನಿರ್ದಿಷ್ಟ ಮೊತ್ತದ ಮೇಲೆ ಒಂದೇ ಸರಳ ಬಡ್ಡಿ ದರದಲ್ಲಿ 6 ವರ್ಷದಲ್ಲಿ ಮತ್ತು 9 ವರ್ಷದಲ್ಲಿ ಗಳಿಸುವ ಸರಳ ಬಡ್ಡಿಯ ಅನುಪಾತ ಏನು ?

(1) 1 : 4

(2) 1 : 3

(3) 2 : 3

(4) 3 : 2

67. ಒಂದು ಟಿ.ವಿ. ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮೊದಲ ಸುತ್ತಿನಲ್ಲಿ, ಸೋನಾ 10 ಪ್ರಶ್ನೆಗಳಿಗೆ ಉತ್ತರಿಸಿದಳು. ಅವಳು ಪ್ರತಿ ಸರಿಯಾದ ಉತ್ತರಕ್ಕೆ 4 ಅಂಕಗಳನ್ನು ಪಡೆದಳು ಮತ್ತು ಪ್ರತಿ ತಪ್ಪು ಉತ್ತರಕ್ಕೆ ಒಂದು ಅಂಕ ಕಳೆದು ಕೊಳ್ಳುವಳು. ಅವಳು ಕೇಳಿದ ಎಲ್ಲಾ ಪ್ರಶ್ನೆಗಳಿಗು ಉತ್ತರಿಸಬೇಕು. ಅವಳು ಎರಡನೇ ಸುತ್ತಿನಲ್ಲಿ ಭಾಗವಹಿಸಲು 20 ಕ್ಕಿಂತ ಹೆಚ್ಚು ಅಂಕಗಳ ಅಗತ್ಯವಿದೆ. ಅವಳು ಕನಿಷ್ಠ ಎಷ್ಟು ಪ್ರಶ್ನೆಗೆ ಸರಿಯಾದ ಉತ್ತರವನ್ನು ನೀಡಿದಲ್ಲಿ ಎರಡನೆ ಸುತ್ತಿಗೆ ಅರ್ಹತೆ ಪಡೆಯುವಳು ?

(1) 8

(2) 7

(3) 6

(4) 5

68. ರಾಧಾ ನ ತೋಟದಲ್ಲಿ ಮೂರು ಗುಲಾಬಿ ಸಸ್ಯಗಳಿವೆ. ಮೊದಲ ಗುಲಾಬಿ ಸಸ್ಯ ಒಂದು ಹೂವನ್ನು ದಿನನಿತ್ಯ ನೀಡುತ್ತದೆ, ಎರಡನೇ ಸಸ್ಯ ಪ್ರತಿ ಎರಡು ದಿನಗಳಿಗೆ ಒಂದು ಹೂವನ್ನು ನೀಡುತ್ತದೆ ಮತ್ತು ಮೂರನೇ ಸಸ್ಯ ಪ್ರತಿ ಮೂರು ದಿನಗಳಿಗೆ ಒಂದು ಹೂವನ್ನು ನೀಡುತ್ತದೆ. ಈ ಮಾಹಿತಿಯ ಆಧಾರದ ಮೇಲೆ. ಆರು ದಿನಗಳ ಕಾಲದಲ್ಲಿ ರಾಧಾ ಸಂಗ್ರಹಿಸುವ ಹೂವುಗಳ ಸಂಖ್ಯೆ

(1) 6

(2) 11

(3) 12

(4) 18

www.kpscvaani.com

69. ಒಂದು ವರ್ಗದಲ್ಲಿ ಹುಡುಗರಿಗಿಂತ 6 ಜನ ಹೆಚ್ಚು ಹುಡುಗಿಯರಿದ್ದಾರೆ. ಹುಡುಗರು ಮತ್ತು ಹುಡುಗಿಯರ ಅನುಪಾತ 2 : 5. ಹಾಗಾದರೆ ತರಗತಿಯಲ್ಲಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ

(1) 11
(2) 14
(3) 21
(4) 13

70. ಒಂದು ತರಗತಿಯಲ್ಲಿನ ವಿದ್ಯಾರ್ಥಿಗಳನ್ನು ಸಾಲುಗಳಲ್ಲಿ ನಿಲ್ಲುವಂತೆ ಮಾಡಲಾಗಿದೆ. ಒಂದು ವೇಳೆ ಒಂದು ಸಾಲಿನಲ್ಲಿ ಮೂವರು ವಿದ್ಯಾರ್ಥಿಗಳು ಅಧಿಕವಾಗಿದ್ದಲ್ಲಿ, ಒಂದು ಸಾಲು ಕಡಿಮೆಯಾಗುತ್ತಿತ್ತು. ಒಂದು ವೇಳೆ ಒಂದು ಸಾಲಿನಲ್ಲಿ ಮೂವರು ವಿದ್ಯಾರ್ಥಿಗಳು ಕಡಿಮೆಯಾದಲ್ಲಿ, ಎರಡು ಸಾಲುಗಳು ಅಧಿಕವಾಗುತ್ತದೆ, ಹಾಗಿದ್ದಲ್ಲಿ ತರಗತಿಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯು

(1) 18
(2) 24
(3) 27
(4) 36

71. ಒಬ್ಬ ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಅಂತಿಮ ಅಂಕಗಳನ್ನು ನಿಯೋಜನೆಗೆ 20% ಮತ್ತು ಪರೀಕ್ಷೆಗೆ 80% ರಂತೆ ಪ್ರಾಮುಖ್ಯತೆಯ ಪ್ರಕಾರ. ನೀಡುತ್ತಾರೆ ಒಬ್ಬ ವಿದ್ಯಾರ್ಥಿಯ ನಿಯೋಜನೆಗೆ 80 ಅಂಕಗಳನ್ನು ಗಳಿಸಿದ್ದಾನೆ. ಅವನ ಅಂತಿಮ ಅಂಕಗಳು 72 ಆಗಿವೆ. ಹಾಗಾದರೆ ಅವನು ಪರೀಕ್ಷೆಗೆ ಗಳಿಸಿದ ಅಂಕಗಳು ಎಷ್ಟು?

(1) 88
(2) 56
(3) 64
(4) 70

72. ಒಂದು ಸಾಲಿನಲ್ಲಿರುವ ಮನೆಗಳನ್ನು ಅನುಕ್ರಮವಾಗಿ 1 ರಿಂದ 49 ಸಂಖ್ಯೆಗಳಿಂದ ಹೆಸರಿಸಲಾಗಿದೆ. ಒಂದು ಮೌಲ್ಯ 'N' ಅಂಕದ ಮನೆಯ ಮೊದಲಿರುವ ಎಲ್ಲ ಮನೆಯ ಅಂಕಗಳ ಮೊತ್ತವು 'N' ಮನೆಯ ನಂತರ ಇರುವ ಎಲ್ಲ ಮನೆಯ ಅಂಕಗಳ ಮೊತ್ತಕ್ಕೆ ಸಮವಾಗಿದೆ ದಾಗಿದಲ್ಲಿ 'N' ಅಂದರೆ

(1) 25
(2) 28
(3) 32
(4) 35

73. ದಯವಿಟ್ಟು ಚಿತ್ರವನ್ನು ಎಚ್ಚರಿಕೆಯಿಂದ ಗಮನಿಸಿ ಮತ್ತು ಕೆಳಗೆ ಕೊಟ್ಟಿರುವ ಪ್ರಶ್ನೆಗೆ ಉತ್ತರಿಸಿ :



ಎಷ್ಟು ಜನ ನೃತ್ಯಗಾರರು ಗಾಯಕರಾಗಿದ್ದಾರೆ ಆದರೆ ವೃತ್ತಿಯಿಂದ ವೈದ್ಯರಾಗಿಲ್ಲ?

(1) 15
(2) 27
(3) 12
(4) 22

www.kpscvaani.com

74. ಪಟ್ಟಿ I (ಭಾರತದ ಸಂವಿಧಾನದ ಅವಕಾಶಗಳು) ಮತ್ತು ಪಟ್ಟಿ II (ಆಕರ) ಇವುಗಳನ್ನು ಸಂಕೇತ ಆಧರಿಸಿ ಹೊಂದಿಸಿರಿ :

ಪಟ್ಟಿ I (ಅವಕಾಶಗಳು)		ಪಟ್ಟಿ II (ಆಕರ)
A. ನಿರ್ದೇಶನಾ ತತ್ವಗಳು	I.	ಐರ್ಲೆಂಡ್ ಸಂವಿಧಾನ
B. ತುರ್ತು ಅವಕಾಶಗಳು	II.	ಜರ್ಮನಿ ಸಂವಿಧಾನ
C. ಕೇಂದ್ರ – ರಾಜ್ಯ ಸಂಬಂಧಗಳು	III.	ಕೆನಡಾ ಸಂವಿಧಾನ
D. ಸಂವಿಧಾನ ತಿದ್ದುಪಡಿ	IV.	ದಕ್ಷಿಣ ಆಫ್ರಿಕಾ ಸಂವಿಧಾನ

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	I	II	III	IV
(2)	II	I	III	IV
(3)	II	I	IV	III
(4)	I	II	IV	III

75. ಭಾರತದ ಸಂವಿಧಾನದ ಪ್ರಕಾರ ಕೇಂದ್ರ ಪಾರ್ಲಿಮೆಂಟ್ ಅನುಮೋದಿಸಿದ ಮಸೂದೆಯನ್ನು ಕಾನೂನಾಗಿಸುವ ಮೊದಲು ರಾಷ್ಟ್ರಪತಿಯವರ ಅನುಮೋದನೆ ಅಗತ್ಯವಿದೆ. ಸಾಮಾನ್ಯವಾಗಿ, ರಾಷ್ಟ್ರಪತಿಯವರು ತಮ್ಮ ಅನುಮೋದನೆಯನ್ನು ನೀಡುವರಾದರೂ ತಮ್ಮ ಒಪ್ಪಿಗೆಯನ್ನು ತಡೆಹಿಡಿದು ಸದನ ವನ್ನು ಮರುಪರಿಗಣನೆಗೆ ಹೇಳಬಹುದು. ಈ ಅಧಿಕಾರವು ಯಾವ ಮಸೂದೆ / ಮಸೂದೆಗಳಿಗೆ ಅನ್ವಯವಾಗುವುದು ?

A. ಹಣಕಾಸು ಮಸೂದೆ
B. ಸಾಮಾನ್ಯ ಮಸೂದೆ
C. ವಿತ್ತ ಮಸೂದೆ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು B ಮಾತ್ರ
(2) B ಮಾತ್ರ
(3) B ಮತ್ತು C ಮಾತ್ರ
(4) A, B ಮತ್ತು C

76. ವಿಕ್ರಮಾಂಕದೇವ ಚರಿತದ ಕರ್ತೃ ಬಿಲ್ಹಣ ಮತ್ತು ಮಿತಾಕ್ಷರದ ಲೇಖಕನಾದ ವಿಜ್ಞಾನೇಶ್ವರರು ಆಸ್ಥಾನದಲ್ಲಿದ್ದದ್ದು

(1) ತೈಲ
(2) ಜಯಸಿಂಹ
(3) ವಿಕ್ರಮಾದಿತ್ಯ VI
(4) ಸತ್ಯಾಶ್ರಯ

77. "ಭಾರತ ಮತ್ತು ಅರೇಬಿಯಾದ ಇಡೀ ಪ್ರಾಚೀನ ಸಾಹಿತ್ಯ ಉತ್ತಮ ಯುರೋಪಿಯನ್ ಗ್ರಂಥಾಲಯದ ಒಂದು ಕಪಾಟಿಗೆ ಸಮನಲ್ಲ" – ಎಂದು ಹೇಳಿದವರು ಯಾರು ?

(1) ವಿಲಿಯಮ್ ಬೆಂಟಿಂಕ್
(2) ವಿಲಿಯಮ್ ಕಾರೇ
(3) ಥಾಮಸ್ ಬಾಬಿಂಗ್ಟನ್ ಮೆಕಾಲೆ
(4) ಜೇಮ್ಸ್ ಪ್ರಿನ್ಸೆಪ್

78. ಅಕ್ಬರ್‌ನ ದಿಗ್ವಿಜಯಗಳನ್ನು ಕಾಲಾನುಕ್ರಮದಲ್ಲಿ ಹೊಂದಿಸಿ :

A. ಗುಜರಾತ್ ದಿಗ್ವಿಜಯ
B. ಕಾಬುಲ್ ದಿಗ್ವಿಜಯ
C. ಸಿಂಧ್ ದಿಗ್ವಿಜಯ
D. ಖಂದೇಶ್ ದಿಗ್ವಿಜಯ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A, C, D, B
(2) B, A, C, D
(3) A, B, C, D
(4) D, A, B, C

www.kpscvaani.com

79. "ಹುತಾತ್ಮ ಸಂತ" ನೆನಿಸಿಕೊಂಡು ನೆನಪಿನಲ್ಲಿ ಉಳಿದ ವರಾರು ?
(1) ರಾಜಕುಮಾರ ಖುರ್ರಮ್
(2) ರಾಜಕುಮಾರ ಸಲೀಮ್
(3) ರಾಜಕುಮಾರ ಖುಸ್ರೋ
(4) ರಾಜಕುಮಾರ ಮುರಾದ್

80. ಭಾರತದ ಪಾರ್ಲಿಮೆಂಟಿಗೆ ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಪರಿಗಣಿಸಿ :
A. ಲೋಕಸಭಾ ಸದಸ್ಯರನ್ನು ಪಾರ್ಲಿಮೆಂಟ ಅಧಿವೇಶನ ನಡೆಯುವಾಗ ಯಾವುದೇ ಪ್ರಕರಣದಡಿಯಲ್ಲೂ ಪೋಲೀಸರು ಬಂಧಿಸುವಂತಿಲ್ಲ.
B. ಲೋಕಸಭಾ ಸದಸ್ಯರಿಗೆ ಕಾನೂನು ನ್ಯಾಯಾಯಗಳಲ್ಲಿ ಸಾಕ್ಷಿಯಾಗಿ ಬರಲು ವಿನಾಯ್ತಿಯ ಅವಕಾಶವುಂಟು.
ಈ ಹೇಳಿಕೆಗಳ ಪೈಕಿ ಯಾವುದು ಸರಿ ?
(1) A ಮಾತ್ರ
(2) B ಮಾತ್ರ
(3) A ಮತ್ತು B ಎರಡೂ
(4) A ಅಥವಾ B ಎರಡೂ ಅಲ್ಲ

81. ಪೋರ್ಚುಗೀಸರ ವಿರುದ್ಧ ಕೆಳದಿಯ ವೆಂಕಟಪ್ಪ ನಾಯಕ ಯುದ್ಧ ಸಾರಿದಾಗ ಆತನಿಗೆ ರಾಣಿ ಅಬ್ಬಕ್ಕದೇವಿ ಆಸರೆ ನೀಡಿದ್ದನ್ನು ದಾಖಲಿಸಿದ ಪೋರ್ಚುಗೀಸ್ ಪ್ರವಾಸಿ ಯಾರು ?
(1) ಬಾರ್ಬೊಸಾ
(2) ಪೈಟ್ರೊ ಡೆಲ್ಲಾವೆಲ್ಲಿ
(3) ನೂನಿಜ್
(4) ಡೊಮಿಂಗೋ ಪೇಸ್

82. 'ಯವನ ರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದು ಪಡೆದ ದೊರೆ ಯಾರು ?
(1) ವೀರ ನರಸಿಂಹ
(2) ಕೃಷ್ಣದೇವರಾಯ
(3) ಅಚ್ಯುತದೇವರಾಯ
(4) ಅಳಿಯ ರಾಮರಾಯ

83. ಕಾರವಾರದಿಂದ ಬಲ್ಲಾರ್ ವರೆಗಿನ ತೀರವನ್ನು ಹೀಗೆಂದು ಕರೆಯುತ್ತಾರೆ
(1) ಮಲಬಾರ್ ತೀರ
(2) ಕೊಂಕಣ್ ತೀರ
(3) ಕಾಥಿಯಾವಾರ್ ತೀರ
(4) ಕೋರಮಂಡಲ ತೀರ

84. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಪ್ರತ್ಯೇಕಿಸಲ್ಪಟ್ಟಿರುವುದು ಇದರಿಂದ
(1) ಐದು ಡಿಗ್ರಿ ಚಾನೆಲ್
(2) ಎಂಟು ಡಿಗ್ರಿ ಚಾನೆಲ್
(3) ಒಂಬತ್ತು ಡಿಗ್ರಿ ಚಾನೆಲ್
(4) ಹತ್ತು ಡಿಗ್ರಿ ಚಾನೆಲ್

85. ಗ್ರೇಟ್ ಬ್ಯಾರಿಯರ್ ರೀಫ್ ಇದಕ್ಕೆ ಸಮಾಂತರವಾಗಿದೆಯೆಂದು ಕಂಡುಹಿಡಿಯಲಾಗಿದೆ
(1) ಆಸ್ಟ್ರೇಲಿಯಾದ ದಕ್ಷಿಣ ತೀರ
(2) ಆಸ್ಟ್ರೇಲಿಯಾದ ಈಶಾನ್ಯ ತೀರ
(3) ಆಸ್ಟ್ರೇಲಿಯಾದ ಪಶ್ಚಿಮ ತೀರ
(4) ಆಸ್ಟ್ರೇಲಿಯಾದ ನೈರುತ್ಯ ತೀರ

www.kpscvaani.com

86. ಗಲ್ಫ್ ಸ್ಟ್ರೀಂ ಎಂಬುದು ಇದರಲ್ಲಿನ ಸಾಗರಿಕ ಪ್ರವಾಹ ಆಗಿದೆ

(1) ಭಾರತೀಯ ಸಾಗರ

(2) ಪೆಸಿಫಿಕ್ ಸಾಗರ

(3) ಅಟ್ಲಾಂಟಿಕ್ ಸಾಗರ

(4) ಆರ್ಕಟಿಕ ಸಾಗರ

87. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದು ?

A. ಗೋಲ್ಡನ್ ಬೀಚ್ – ತಮಿಳುನಾಡು

B. ಮರಾರಿ ಬೀಚ್ – ಗೋವಾ

C. ರಾಮಕೃಷ್ಣ ಮಿಶನ್ ಬೀಚ್ – ಆಂಧ್ರ ಪ್ರದೇಶ್

D. ಚಂದೀಪುರ್ ಬೀಚ್ – ಒರಿಸ್ಸಾ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) B ಮತ್ತು D ಮಾತ್ರ

(4) A, C ಮತ್ತು D ಮಾತ್ರ

88. ಈ ಪೈಕಿ ಕಾರ್ಬನಿನ ಬಹುರೂಪಗಳನ್ನು ಪತ್ತೆಮಾಡಿ :

A. ಗ್ರಾಫೀನ್

B. ಫುಲರಿನ್

C. ಕಾರ್ಬೊರುಂಡಮ್

D. ವಜ್ರ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A, B ಮತ್ತು D ಮಾತ್ರ

(2) A, C ಮತ್ತು D ಮಾತ್ರ

(3) A, B, C ಮತ್ತು D ಮಾತ್ರ

(4) A, B ಮತ್ತು C ಮಾತ್ರ

89. "ಆಧಾರ ಪರಿಣಾಮ" (Base Effect) ದ ಮೇಲೆ ಹಣದುಬ್ಬರದ ದರದ ಹೆಚ್ಚಳುವು ಆರೋಪಿತವಾಗಿದೆ. ಈ "ಆಧಾರ ಪರಿಣಾಮ" ಎಂದರೇನು ?

(1) ಬೆಳೆಗಳ ವೈಫಲ್ಯದಿಂದಾಗಿ ಉಂಟಾದ ಅಗಾಧ ಕೊರತೆಯ ಪರಿಣಾಮ.

(2) ತೀವ್ರಗತಿಯ ಆರ್ಥಿಕ ಬೆಳವಣಿಗೆಯಿಂದುಂಟಾದ ಬೇಡಿಕೆಯಲ್ಲಾದ ಅಲ್ಪೋಲ (ಸರ್ಜ್) ಕಲ್ಲೋಲದ ಪರಿಣಾಮ.

(3) ಹಣದುಬ್ಬರದ ದರದ ಲೆಕ್ಕಾಚಾರದ ಮೇಲೆ ಹಿಂದಿನ ವರ್ಷದ ದರ ಮಟ್ಟದಿಂದುಂಟಾದ ಪರಿಣಾಮ.

(4) ಮೇಲೆ ನೀಡಿರುವ ಹೇಳಿಕೆಗಳಾವುವು ಸರಿಯಲ್ಲ.

90. 'ನಿಜಾಂ-ಉಲ್-ಮುಲ್ಕ್ ಆಸಫ್ ಝಾ' ಎಂಬ ಬಿರುದನ್ನು ಗಳಿಸಿದರು ಮತ್ತು ಹೈದರಾಬಾದ್ ನಗರವನ್ನು ಸ್ಥಾಪಿಸಿದರು ?

(1) ಸಾದತ್ ಖಾನ್

(2) ಸಫ್ದರ್ ಜಂಗ್

(3) ಚಿನ್ ಕಿಲ್ಚ್ ಖಾನ್

(4) ಮುರ್ಶಿದ್ ಖುಲಿ ಖಾನ್

91. "ಆಯ್ಕೆದಿನ" ಪುಸ್ತಕವನ್ನು ಬರೆದ ಕರ್ತೃ ಈ ಪೈಕಿ ಯಾರು ? ಈ ಕೃತಿಯಲ್ಲಿ ಮುಂಬಯಿಯ ಕೆಳಗೇರಿಯಲ್ಲಿ ವಾಸಿಸುವ ಇಬ್ಬರು ಸೋದರರನ್ನು ಅವರ ತಂದೆ ಬೆಳೆಸಿ ಕ್ರಿಕೆಟ್‌ತಾರೆಗಳನ್ನಾಗಿಸಿದ ಬಗ್ಗೆ ಇದೆ.

(1) ಅರವಿಂದ ಅಡಿಗ

(2) ಅಮಿತವ್ ಘೋಷ್

(3) ಜೇಮ್ಸ್ ಪ್ಯಾಟರಸನ್

(4) ಸಂಜೀವ್ ಸನ್ಯಾಲ್

www.kpscvaani.com

92. "ಓಲಿಜ್ಯಾಪಿಂಗ್" ಎಂದರೇನು ?

(1) ಸಾಗರಾಂತರಾಳದ ತೈಲಾನ್ವೇಷಣೆಗೆ ಬಳಕೆ ಮಾಡುವ ಇತ್ತೀಚಿನ ತಂತ್ರಜ್ಞಾನ

(2) ಮೇಜ್ (ಮೆಕ್ಕೆ) ಬಗೆಯಿಂದ ಅನುವಂಶೀಯವಾಗಿ ಜೈವಿಕ ಇಂಧನ ಉತ್ಪಾದಿಸುವಬಗೆ

(3) ತೈಲ ಬಾವಿಗಳಲ್ಲಿ ಆಕಸ್ಮಿಕವಾಗಿ ಉಂಟಾಗುವ ಜ್ವಾಲೆ ಆರಿಸಲು ಬಳಕೆ ಆಗುವ ಇತ್ತೀಚಿನ ತಂತ್ರಜ್ಞಾನ

(4) ತೈಲ ಸೋರಿಕೆಯ ಅಪಾಯ ನಿಯಂತ್ರಿಸಲು ಬ್ಯಾಕ್ಟೀರಿಯಾ ಬಳಕೆಮಾಡುವ ತಂತ್ರಜ್ಞಾನ

93. ಮುಸ್ಲಿಂ ಲೀಗ್‌ನ್ನು ಸೇರುವಾಗ ಹೀಗೆಂದು ಹೇಳಿದವರಾರು "ಆತನ ನಿಷ್ಠೆ ಮುಸ್ಲಿಂ ಲೀಗ್‌ಗೆ ಮತ್ತು ಮುಸ್ಲಿಂ ಅಸಕ್ತಿಯು ಯಾವುದೇ ರೀತಿಯಲ್ಲಾಗಲೀ ಮತ್ತು ಯಾವುದೇ ಸಮಯದಲ್ಲಾಗಲೀ, ನಿಷ್ಠೆಯಲ್ಲದಿರುವಿಕೆಯ ನೆರಳು ಆತನ ಜೀವವನ್ನೇ ಮುಡಿಪಾಗಿಟ್ಟಿದ್ದಾಗಲೂ ಸೂಚ್ಯವಾಗುವುದಿಲ್ಲ"

(1) ಆಗಾ ಖಾನ್

(2) ಮಹಮದ್ ಅಲಿ ಜಿನ್ನಾ

(3) ಮೊಹ್ಸಿನ್-ಉಲ್-ಮುಲ್ಕ್

(4) ವಿಕಾರ್-ಉಲ್-ಮುಲ್ಕ್

94. ಇಲ್ಬರ್ಟ್ ಮಸೂದೆಯ ವಿವಾದವು ಇದಕ್ಕೆ ಸಂಬಂಧಿಸಿದ್ದು

(1) ಭಾರತೀಯರು ಶಸ್ತ್ರಾಸ್ತ್ರಗಳನ್ನು ಒಯ್ಯುವುದರ ಮೇಲಿನ ಕೆಲವು ನಿರ್ಬಂಧಗಳ ಹೇರಿಕೆ

(2) ಭಾರತೀಯ ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದ ವಾರ್ತಾಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಮೇಲಿನ ನಿರ್ಬಂಧಗಳ ಹೇರಿಕೆ

(3) ಯುರೋಪಿಯನ್ನರ ವಿಚಾರಣೆ ಕುರಿತಂತೆ ಭಾರತೀಯ ಮ್ಯಾಜಿಸ್ಟ್ರೇಟ್‌ಗಳಿಗೆ ವಿಧಿಸಲಾಗಿದ್ದ ಅನರ್ಹತೆಯ ರದ್ದತಿ

(4) ಅಮದು ಮಾಡಿಕೊಳ್ಳಲಾಗಿದ್ದ ಹತ್ತಿಬಟ್ಟೆಯ ಮೇಲಿನ ಸುಂಕದ ರದ್ದತಿ

95. ಬೆಳ್ಳಿಯನ್ನು ಒಳಗೊಂಡಿರುವ ಸಾಮಗ್ರಿ ಎಂದರೆ :

A. ಹಾರ್ನ್ ಬೆಳ್ಳಿ

B. ಜರ್ಮನ್ ಬೆಳ್ಳಿ

C. ರೂಬಿ ಬೆಳ್ಳಿ

D. ಲ್ಯೂನಾರ್ ಕಾಸ್ಟಿಕ್

ಮೇಲಿನವುಗಳಲ್ಲಿ ಯಾವುವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು C ಮಾತ್ರ

(2) A, B ಮತ್ತು D ಮಾತ್ರ

(3) A, B ಮತ್ತು C ಮಾತ್ರ

(4) A, C ಮತ್ತು D ಮಾತ್ರ

96. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು

(1) ಸಂಸತ್ತಿನಿಂದ ಆಯ್ಕೆಯಾಗುತ್ತಾರೆ

(2) ಸಂಸತ್ತಿನ ಸಲಹೆಯಂತೆ ರಾಷ್ಟ್ರಪತಿಗಳಿಂದ ನೇಮಿಸಲ್ಪಡುತ್ತಾರೆ

(3) ಪ್ರಧಾನ ಮಂತ್ರಿಗಳ ಸಲಹೆಯ ಮೇರೆಗೆ ರಾಷ್ಟ್ರಪತಿಗಳಿಂದ ನೇಮಿಸಲ್ಪಡುತ್ತಾರೆ

(4) ಮಂಡಳಿ (ಕೊಲಿಜಿಯಂ) ರ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿಯವರಿಂದ ನೇಮಿಸಲ್ಪಡುತ್ತಾರೆ

www.kpscvaani.com

97. 'ಕೊಲೆಸ್ಟಾಲ್' ಕುರಿತಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಇದು ಕ್ಲೋರೋಫಿಲ್‌ನ ಒಂದು ಬಗೆ.

B. ಇದು ಕ್ಲೋರೋಫಾರ್ಮ್‌ನ ನಿಷ್ಪನ್ನ.

C. ಪ್ರಾಣಿಜನ್ಯ ಕೊಬ್ಬುಗಳಲ್ಲಿ ದೊರೆಯುವ ಒಂದು ಕೊಬ್ಬಿನ ಆಲ್ಕೋಹಾಲ್.

D. ಇದು ಅಧಿಕ ಒತ್ತಡಕ್ಕೆ ಕಾರಣವಾಗುತ್ತದೆ.

ಮೇಲಿನವುಗಳಲ್ಲಿ ಯಾವುವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು B ಮಾತ್ರ

(2) A, C ಮತ್ತು D ಮಾತ್ರ

(3) C ಮತ್ತು D ಮಾತ್ರ

(4) A ಮತ್ತು D ಮಾತ್ರ

98. ಪಟ್ಟಿ I ಮತ್ತು ಪಟ್ಟಿ II ಇವುಗಳನ್ನು ಹೊಂದಿಸಿರಿ :

ಪಟ್ಟಿ I		*ಪಟ್ಟಿ II*
A. ಕಾರ್ಬೋಹೈಡ್ರೇಟ್	I.	ಪೆಪ್ಸಿನ್
B. ಕಿಣ್ವ	II.	ಸ್ಟಾರ್ಚ್ (ಪಿಷ್ಟ)
C. ಹಾರ್ಮೋನ್	III.	ಕೆರಾಟಿನ್
D. ಪ್ರೋಟೀನ್	IV.	ಇನ್ಸುಲಿನ್

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	I	II	III	IV
(2)	II	I	IV	III
(3)	II	I	III	IV
(4)	I	II	IV	III

99. ಮೇಲ್ಮೈ ಒತ್ತಡದ ಆಧಾರದ ಮೇಲೆ ಕೆಳಗಿನ ಯಾವುದನ್ನು ವಿವರಿಸಬಹುದು ?

A. ಮಳೆ ಹನಿಗಳ ಗೋಳಾಕಾರ ಆಕೃತಿ

B. ಸೊಳ್ಳೆಗಳ ಲಾರ್ವಾಗಳನ್ನು ಮುಳುಗಿಸಲು ನೀರಿನ ಮೇಲೆ ಎಣ್ಣೆಯ ಸಿಂಪಡಿಸುವಿಕೆ

C. ಡಿಟರ್ಜೆಂಟ್‌ಗಳನ್ನು ಬಳಸುವುದರಿಂದ ಬಟ್ಟೆಗಳಲ್ಲಿನ ಕೊಳೆಯ ನಿರ್ಮೂಲನ

D. ಸಮುದ್ರ ಅಲೆಗಳ ಉಬ್ಬರದ ರೂಪ ತಾಳುವಿಕೆ ಮತ್ತು ಚಲನೆ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A, B ಮತ್ತು C ಮಾತ್ರ

(2) A, B ಮತ್ತು D ಮಾತ್ರ

(3) A, C ಮತ್ತು D ಮಾತ್ರ

(4) A ಮತ್ತು B ಮಾತ್ರ

100. ಪಟ್ಟಿ I (ನಗರಗಳೊಂದಿಗೆ) ಮತ್ತು ಪಟ್ಟಿ II (ನದಿಗಳು) ನಲೆಯಾಗಿರುವ ಭಾಗಗಳನ್ನು ಹೊಂದಿಸಿರಿ :

ಪಟ್ಟಿ I (ನಗರಗಳು)	*ಪಟ್ಟಿ II (ನದಿಗಳು)*
A. ನ್ಯೂ ಯಾರ್ಕ್	I. ಇಂಡಸ್
B. ಕರಾಚಿ	II. ಹಡ್ಸನ್
C. ಅಲೆಕ್ಸಾಂಡ್ರಿಯಾ	III. ಸೈನ್
D. ಪ್ಯಾರಿಸ್	IV. ನೈಲ್
	V. ಟಾಗಸ್

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

	A	B	C	D
(1)	I	II	III	IV
(2)	II	I	IV	III
(3)	II	V	III	IV
(4)	I	V	IV	III

www.kpscvaani.com